ಲಾಕ್‌ಡೌನ್ ಘೋಷಣೆ ನಂತರ ಅವನು ಸರಿಯಾಗಿ ವ್ಯಾಪಾರ ಇಲ್ಲದೆ ಇಳಿದು ಹೋಗಿದ್ದ. ಅವನ ಬಳಿ ಕುಳಿತು ಅವಳು ರೋದಿಸುತ್ತಿದ್ದಳು.

ಅವನಿಗೆ ಕೋವಿಡ್ ಇರಬಹುದೇ ಎಂಬ ಸಂಶಯವೊಂದು ಅವಳ ತಲೆಯಲ್ಲಿ ಸುಳಿಯಿತು. ಅವನಿಗೆ ಕೋವಿಡ್ ಆದರೆ ತನಗೂ ಅದು ಬಂದಿರಬಹುದು. ಅದು ಗೊತ್ತಿಲ್ಲದೆ ಬರುತ್ತದೆ. ನರಳಿ ನರಳಿ ಸಾಯಿಸುತ್ತದೆ. ಕೋವಿಡ್ ಅಲ್ಲದಿದ್ದರೆ ಹಸಿವು ತಮ್ಮಿಬ್ಬರನ್ನೂ ಬಲಿ ತೆಗೆದುಕೊಳ್ಳುತ್ತದೆ. ಈಗ ಹೋಗಿ ಮನೆ ಸುಟ್ಟು ಹೋದುದಕ್ಕೆ ಪೊಲೀಸರಿಗೆ ದೂರು ಕೊಡುವುದಾ? ಮನೆಯಲ್ಲಿ ಅಕ್ಕಿ ಗೋದಿ ಇಲ್ಲವೆಂದು ಕಾರ್ಪೊರೇಟರಿಗೆ ತಿಳಿಸುವುದಾ? ಜ್ವರದಿಂದ ಬೇಯುತ್ತಿರುವ ಗಂಡನನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸುವುದಾ? ಪ್ರಶ್ನೆಗಳು ಭೂತಾಕಾರವಾಗಿ ಅವಳನ್ನು ಪೀಡಿಸತೊಡಗಿದವು.

ಮದುವೆಯಾಗಿ ಐದು ವರ್ಷಗಳಾಗಿದ್ದರೂ ಅಲ್ಲಾ ಅವರಿಗೆ ಮಕ್ಕಳನ್ನು ಕರುಣಿಸಿರಲಿಲ್ಲ.

